


# ಸರ್ಜರಿ ಇಲ್ಲದೆ ಹೃದಯ ಕವಾಟ ಬದಲಿ ಚಿಕಿತ್ಸೆ



**ಕ್ಲಿಷ್ಟಕರವೆನಿಸಿದ ಹೃದ್ರೋಗ ಸಮಸ್ಯೆ ಹೊಂದಿರುವ ರೋಗಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸದೇ ಟಿಎಂವಿಆರ್ ಎಂಬ ಹೊಸ ವಿಧಾನದ ಮೂಲಕ ಚಿಕಿತ್ಸೆ ನೀಡಿದ್ದು, ಫಲಕಾರಿಯಾಗಿದೆ. ಶಸ್ತ್ರಚಿಕಿತ್ಸೆ ಮಾಡಲು ಅಸಾಧ್ಯವೆನಿಸುವ ರೋಗಿಗಳಿಗೆ ಈ ಪರ್ಯಾಯ ವಿಧಾನ ವರದಾನವಾಗಿದೆ.**

■ **ಯು. ಅನಂತ್**

ಅರವತ್ತೈದರ ಹರೆಯದ ರೇಖಾ ಅವರಿಗೆ ಹೃದ್ರೋಗ. ಸುಮಾರು 12 ವರ್ಷಗಳ ಹಿಂದಿನಿಂದಲೇ ಈ ಸಮಸ್ಯೆಗಾಗಿ ಚಿಕಿತ್ಸೆ ಪಡೆಯುತ್ತಲೇ ಬಂದಿರುವ ಇವರಿಗೆ ಈಚೆಗೆ ರೋಗ ಉಲ್ಬಣಿಸಿತ್ತು. ವಯಸ್ಸು ಹಾಗೂ ಈ ಹಿಂದೆ ಕವಾಟ ಚಿಕಿತ್ಸೆಗಾಗಿ ಸಪೋರ್ಟ್ ರಿಂಗ್ ಬಳಸಿದ ಕಾರಣದಿಂದಾಗಿ ಇವರಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ (open heart surgery) ಅಸಾಧ್ಯವಾಗಿತ್ತು. ಬನ್ನೇರುಘಟ್ಟ ರಸ್ತೆ ಫೋರ್ಟಿಸ್ ಆಸ್ಪತ್ರೆಯ ತಜ್ಞ ಹೃದ್ರೋಗ ಶಸ್ತ್ರಚಿಕಿತ್ಸಕರ ತಂಡ ಹೊಸ ದಾರಿಯೊಂದನ್ನು ಕಂಡುಕೊಂಡಿತು. ಇದೇ ಟ್ರಾನ್ಸ್ ಕ್ಯಾಥೆಟರ್ ಮಿಟ್ರಲ್ ವಾಲ್ವ್ ರಿಪ್ಲೇಸ್‌ಮೆಂಟ್ (ಟಿಎಂವಿಆರ್) ಎಂಬ ಶಸ್ತ್ರಚಿಕಿತ್ಸೆ ರಹಿತ ತಂತ್ರ. ಇದು ಹೃದಯದ ಮಹಾಪಧಮನಿಯ ಬದಲಿ ಕವಾಟವನ್ನು ರಕ್ತನಾಳಗಳ ಮೂಲಕ ಅಳವಡಿಸುವ ಚಿಕಿತ್ಸೆ. ಈ ಚಿಕಿತ್ಸೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದು ವೈದ್ಯಲೋಕದಲ್ಲಿ ಹೊಸ ಭರವಸೆ ಮೂಡಿಸಿದೆ.

ಈ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಶ್ರೀನಿವಾಸ ಪ್ರಸಾದ್, ‘ರೇಖಾ ಅವರಿಗೆ ಈ ಹಿಂದೆ ಹೃದಯ ಸಮಸ್ಯೆ ಉಲ್ಬಣಿಸಿದಾಗ ಕವಾಟ ಚಿಕಿತ್ಸೆಗಾಗಿ ‘ಸಪೋರ್ಟ್ ರಿಂಗ್’ ಬಳಸಲಾಗಿತ್ತು, ಆದರೂ ಪದೇ ಪದೇ ಸಮಸ್ಯೆ ಎದುರಿಸುತ್ತಿದ್ದರು. 2013ರಲ್ಲಿ ಟೆಫ್ಲಾನ್ ಬ್ಯಾಂಡ್‌ಗಳನ್ನು ಬಳಸಿ ಕವಾಟ ಚಿಕಿತ್ಸೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಕಿರಿದಾಗಿದ್ದ ಹೃದಯ ಕವಾಟವನ್ನು ಬಲೂನ್ ಬಳಸಿ ಸ್ವಲ್ಪ ಹಿಗ್ಗಿಸಲಾಗಿತ್ತು. ಆ ಕ್ಷಣಕ್ಕೆ ಚೇತರಿಸಿಕೊಂಡರೂ ರೋಗಿಯ ಹೃದಯ ಕವಾಟದ ಅಂಗಾಂಶವು ಮತ್ತೆ ಕ್ಷೀಣಿಸಲಾರಂಭಿಸಿತು. ಇದರಿಂದ ಮಹಿಳೆಗೆ ಕವಾಟ ವೈಫಲ್ಯ ಉಂಟಾಗಿ ಜೀವಕ್ಕೆ ಅಪಾಯ ಎದುರಾಗುವ ಸಂಭವವಿತ್ತು. ಈ ಹಿಂದೆ ಟೆಫ್ಲಾನ್